**ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್**
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ –584 115, ರಾಯಚೂರು ಜಿಲ್ಲೆ, ಕರ್ನಾಟಕ ರಾಜ್ಯ, ದೂರವಾಣಿ: (08537) 275041,
**CIN No. U85110KA1947SGC001321**

ಸಂಖ್ಯೆ:ಹಚಿಗ/ಮಾಸ/ಇಎಸ್‌ಟಿ/ನೇನೇಪ್ರ/10/2023–24 ದಿನಾಂಕ: 15–03–2024

# ಉದ್ಯೋಗ ಪ್ರಕಟಣೆ

ಭಾರತದಲ್ಲಿ ಚಿನ್ನ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ಹಟ್ಟಿ ಚಿನ್ನದ ಗಣಿ ಕಂಪನಿಯು ವಾರ್ಷಿಕವಾಗಿ ಅಂದಾಜು **ರೂ. 830 ಕೋಟಿಗಳ** ವಹಿವಾಟು ಹೊಂದಿರುವ ಮತ್ತು ತನ್ನ ಸ್ಥಾವರ/ಗಣಿಯನ್ನು ವಿಸ್ತರಣೆ ಮಾಡುವ ಮಹತ್ವಕಾಂಕ್ಷೆ ಯೋಜನೆಯನ್ನು ಹೊಂದಿರುತ್ತದೆ. ಹಟ್ಟಿ ಚಿನ್ನದ ಗಣಿ ಕಂಪನಿಯ ವಿವಿಧ ವಿಭಾಗಗಳಲ್ಲಿ **ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದ (Kalyana Karnataka (Local) Cadre)** ದಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕಲ್ಯಾಣ ಕರ್ನಾಟಕ ವೃಂದದ ಅರ್ಹ ಅಭ್ಯರ್ಥಿಗಳಿಂದ ಕಂಪನಿಯ ವೆಬ್‌ಸೈಟ್ https://huttigold.karnataka.gov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸದರಿ ನೇಮಕಾತಿಗಳನ್ನು ಕರ್ನಾಟಕ ಸರ್ಕಾರದ ಪರಿಷ್ಕೃತ ಆದೇಶ ಸಿಆಸುಇ 01 ಸೆಹಿಮ 2022, ದಿನಾಂಕ 28–12–2022 ಹಾಗೂ ಸಿಆಸುಇ2 ಸೆಹಿಮ 2023, ದಿನಾಂಕ 08–03–2023 ರ ನೇರ (Vertical) ಮತ್ತು ಸಮತಲ (Horizontal) ರೋಸ್ಟರ್ ಮೀಸಲಾತಿ ನಿಯಮಗಳನ್ವಯ ಹುದ್ದೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

**I. ಜಿ–5 ದರ್ಜೆಯ ಹುದ್ದೆಗಳು, ವೇತನ ಶ್ರೇಣಿ: ರೂ.25000–48020 + ಅನ್ವಯಿಸುವ ಕೈಗಾರಿಕೆ ತುಟ್ಟಿ ಭತ್ಯೆ (ವೇತನ ಪರಿಷ್ಕರಣೆ 01–04–2021 ರಿಂದ ಬಾಕಿ ಇರುತ್ತದೆ).**

**1.ಸಹಾಯಕ ಫೋರ್ಮೆನ್ (ಗಣಿ)** **ಹುದ್ದೆಗಳು : 15** **ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಮೈನಿಂಗ್)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | 2 | 1 | 1 | - | 1 | - | - | - | 5 |
| 2 | ಮಹಿಳೆ | 2# | 2# | 1# | - | - | - | - | - | 5# |
| 3 | ಗ್ರಾಮೀಣ | 2 | 1 | - | - | - | - | - | - | 3 |
| 4 | ಅಂಗವಿಕಲ | 1* | 1* | - | - | - | - | - | - | 2* |
| | ಒಟ್ಟು | 7 | 5 | 2 | - | 1 | - | - | - | 15 |

**ವಿಶೇಷ ಸೂಚನೆ:**

\# **ಭೂಕೆಳಮೈ ಗಣಿಯಲ್ಲಿ ಮಹಿಳಾ ಅಭ್ಯರ್ಥಿಗಳನ್ನು ನಿಯೋಜಿಸಲು ಕಷ್ಟಸಾಧ್ಯವಾಗಿದ್ದು, ವಿನಾಯಿತಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ವಿನಾಯಿತಿಯನ್ನು ಕೋರಲಾಗಿರುತ್ತದೆ. ಆದ್ದರಿಂದ ಅದೇ ಮೀಸಲಾತಿಯ ಪುರುಷ ಅಭ್ಯರ್ಥಿಗಳಿಂದ ಭರ್ತಿಮಾಡಲಾಗುವದು.**

* **ಭೂಕೆಳಮೈ ಗಣಿಯಲ್ಲಿ ಅಂಗವಿಕಲ ಅಭ್ಯರ್ಥಿಗಳನ್ನು ನಿಯೋಜಿಸಲು ಅವಕಾಶವಿಲ್ಲದಿರುವದರಿಂದ, ಅದೇ ಮೀಸಲಾತಿಯ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.**

**2. ಸಹಾಯಕ ಫೋರ್ಮೆನ್ (ಲೋಹ ಶಾಸ್ತ್ರ)** **ಹುದ್ದೆಗಳು : 05** **ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಮೆಟಲರ್ಜಿ)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | - | - | - | - | - | - | 1 | 1 | 2 |
| 2 | ಮಹಿಳೆ | 1 | - | - | - | - | - | - | - | 1 |
| 3 | ಗ್ರಾಮೀಣ | 1 | - | 1 | - | - | - | - | - | 2 |
| | ಒಟ್ಟು | 2 | - | 1 | - | - | - | 1 | 1 | 5 |

**3. ಸಹಾಯಕ ಫೋರ್ಮೆನ್ (ಸಿವಿಲ್)** **ಹುದ್ದೆಗಳು : 01** **ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಸಿವಿಲ್)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಮಹಿಳೆ | - | - | - | - | 1 | - | - | - | 1 |
| | ಒಟ್ಟು | - | - | - | - | 1 | - | - | - | 1 |

**4. ಸಹಾಯಕ ಫೋರ್ಮೆನ್ (ಎಲೆಕ್ಟ್ರಿಕಲ್)** **ಹುದ್ದೆಗಳು : 01** **ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಎಲೆಕ್ಟ್ರಿಕಲ್)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಮಾಜಿ ಸೈನಿಕ | 1 | - | - | - | - | - | - | - | 1 |
| | ಒಟ್ಟು | 1 | - | - | - | - | - | - | - | 1 |

**5. ಸಹಾಯಕ ಫೋರ್ಮೆನ್ (ಭೂ–ಗರ್ಭಶಾಸ್ತ್ರ)** **ಹುದ್ದೆಗಳು : 02** **ವಿದ್ಯಾರ್ಹತೆ: 03 ವರ್ಷಗಳ ಬಿ.ಎಸ್ಸಿ (ಭೂ–ಗರ್ಭಶಾಸ್ತ್ರ)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಗ್ರಾಮೀಣ | - | - | - | - | 1 | - | - | - | 1 |
| 2 | ಮಾಜಿ ಸೈನಿಕ | - | 1 | - | - | - | - | - | - | 1 |
| | ಒಟ್ಟು | - | 1 | - | - | 1 | - | - | - | 2 |

**6. ಸಹಾಯಕ ಫೋರ್‌ಮೆನ್ (ಡೈಮಂಡ್ ಡ್ರಿಲ್ಲಿಂಗ್/ಭೂಕೆಳಮೈ ವಜ್ರಭೈರಿಗೆ) ಹುದ್ದೆಗಳು : 01 ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಡ್ರಿಲ್ಲಿಂಗ್ ಟೆಕ್ನಾಲಜಿ)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಗ್ರಾಮೀಣ | - | - | - | - | - | - | 1 | - | 1 |
| | ಒಟ್ಟು | - | - | - | - | - | - | 1 | - | 1 |

**7. ಸಹಾಯಕ ಫೋರ್‌ಮೆನ್ (ಮೆಕ್ಯಾನಿಕಲ್) ಹುದ್ದೆಗಳು : 16 ವಿದ್ಯಾರ್ಹತೆ: 03 ವರ್ಷಗಳ ಡಿಪ್ಲೋಮಾ (ಮೆಕ್ಯಾನಿಕಲ್)**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | - | 1 | - | 1 | - | - | - | - | 2 |
| 2 | ಮಹಿಳೆ | 3 | 1 | - | - | 1 | - | 1 | - | 6 |
| 3 | ಗ್ರಾಮೀಣ | 2 | 1 | - | - | 1 | - | - | - | 4 |
| 4 | ಅಂಗವಿಕಲ | - | - | 1 | - | 1 | - | - | - | 2 |
| 5 | ಕನ್ನಡ ಮಾಧ್ಯಮ | 1 | - | - | - | - | - | - | - | 1 |
| 6 | ಯೋಜನಾ ನಿರಾಶ್ರಿತರು | 1 | - | - | - | - | - | - | - | 1 |
| | ಒಟ್ಟು | 7 | 3 | 1 | 1 | 3 | - | 1 | - | 16 |

**8. ಭದ್ರತಾ ನಿರೀಕ್ಷಕರು ಹುದ್ದೆಗಳು : 06 ವಿದ್ಯಾರ್ಹತೆ: 03 ವರ್ಷಗಳ ಯಾವುದೇ ಪದವಿ/ಮಾಜಿ ಸೈನಿಕರಾಗಿದ್ದಲ್ಲಿ (ಸುಬೇದಾರ/ ಸುಬೇದಾರ ನಾಯಕ ಶ್ರೇಣಿ) ಹಾಗೂ ದೈಹಿಕ / ಸಹಿಷ್ಣುತೆ ಪರೀಕ್ಷೆ**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಗ್ರಾಮೀಣ | - | 1 | - | - | - | - | - | - | 1 |
| 2 | ಮಹಿಳೆ | 1 | - | 1 | - | - | - | - | 1 | 3 |
| 3 | ಮಾಜಿ ಸೈನಿಕ | 1 | - | - | - | - | - | - | - | 1 |
| 4 | ತೃತೀಯ ಲಿಂಗ | 1 | - | - | - | - | - | - | - | 1 |
| | ಒಟ್ಟು | 3 | 1 | 1 | - | - | - | - | 1 | 6 |

**II. ಜಿ–8 ದರ್ಜೆಯ ಹುದ್ದೆಗಳು,_ವೇತನ ಶ್ರೇಣಿ: ರೂ.20920–42660 + ಅನ್ವಯಿಸುವ ಕೈಗಾರಿಕೆ ತುಟ್ಟಿ ಭತ್ಯೆ (ವೇತನ ಪರಿಷ್ಕರಣೆ 01–04–2021 ರಿಂದ ಬಾಕಿ ಇರುತ್ತದೆ).**

**1. ಐ.ಟಿ.ಐ. ಫಿಟ್ಟರ್ ದರ್ಜೆ– II (ಗಣಿ ವಿಭಾಗ) ಹುದ್ದೆಗಳು : 45, ವಿದ್ಯಾರ್ಹತೆ: 02 ವರ್ಷಗಳ ಐ.ಟಿ.ಐ.(ಫಿಟ್ಟರ್) ಹಾಗೂ ದೈಹಿಕ / ಸಹಿಷ್ಣುತಾ ಪರೀಕ್ಷೆ**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | 2 | 1 | 1 | 1 | 2 | 1 | 1 | 1 | 10 |
| 2 | ಮಹಿಳೆ | 7# | 3# | 1# | 1# | 2# | 1# | - | 1# | 16# |
| 3 | ಗ್ರಾಮೀಣ | 5 | 2 | 1 | - | 2 | - | - | - | 10 |
| 4 | ಅಂಗವಿಕಲ | 1* | 1* | 1* | - | 1* | - | - | - | 4* |
| 5 | ಕನ್ನಡ ಮಾಧ್ಯಮ | 1 | - | - | - | - | - | - | - | 1 |
| 6 | ಯೋಜನಾ ನಿರಾಶ್ರಿತರು | 1 | - | - | - | - | - | - | - | 1 |
| 7 | ಮಾಜಿ ಸೈನಿಕ | 2 | - | - | - | - | - | - | - | 2 |
| 8 | ತೃತೀಯ ಲಿಂಗ | 1 | - | - | - | - | - | - | - | 1 |
| | ಒಟ್ಟು | 20 | 7 | 4 | 2 | 7 | 2 | 1 | 2 | 45 |

# ಭೂಕೆಳಮೈ ಗಣಿಯಲ್ಲಿ ಮಹಿಳಾ ಅಭ್ಯರ್ಥಿಗಳನ್ನು ನಿಯೋಜಿಸಲು ಕಷ್ಟಸಾಧ್ಯವಾಗಿದ್ದು, ವಿನಾಯಿತಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ವಿನಾಯಿತಿಯನ್ನು ಕೋರಲಾಗಿರುತ್ತದೆ. ಆದ್ದರಿಂದ ಅದೇ ಮೀಸಲಾತಿಯ ಪುರುಷ ಅಭ್ಯರ್ಥಿಗಳಿಂದ ಭರ್ತಿಮಾಡಲಾಗುವದು.

* ಭೂಕೆಳಮೈ ಗಣಿಯಲ್ಲಿ ಅಂಗವಿಕಲ ಅಭ್ಯರ್ಥಿಗಳನ್ನು ನಿಯೋಜಿಸಲು ಅವಕಾಶವಿಲ್ಲದಿರುವದರಿಂದ, ಅದೇ ಮೀಸಲಾತಿಯ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**2. ಐ.ಟಿ.ಐ. ಫಿಟ್ಟರ್ ದರ್ಜೆ– II (ಲೋಹ ವಿಭಾಗ) ಹುದ್ದೆಗಳು : 15, ವಿದ್ಯಾರ್ಹತೆ: 02 ವರ್ಷಗಳ ಐ.ಟಿ.ಐ. (ಫಿಟ್ಟರ್) ಹಾಗೂ ದೈಹಿಕ / ಸಹಿಷ್ಣುತಾ ಪರೀಕ್ಷೆ**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | 2 | - | - | - | - | - | - | - | 2 |
| 2 | ಮಹಿಳೆ | 2 | 1 | - | - | 1 | - | 1 | - | 5 |
| 3 | ಗ್ರಾಮೀಣ | 2 | 1 | - | 1 | 1 | 1 | - | - | 6 |
| 4 | ಅಂಗವಿಕಲ | 1 | - | - | - | - | - | - | - | 1 |
| 5 | ಮಾಜಿ ಸೈನಿಕ | - | 1 | - | - | - | - | - | - | 1 |
| | ಒಟ್ಟು | 7 | 3 | - | 1 | 2 | 1 | 1 | - | 15 |

**3. ಐ.ಟಿ.ಐ. ಫಿಟ್ಟರ್ ದರ್ಜೆ–II (ಭೂಅನ್ವೇಷಣೆ ವಿಭಾಗ) ಹುದ್ದೆಗಳು : 2, ವಿದ್ಯಾರ್ಹತೆ: 02 ವರ್ಷಗಳ ಐ.ಟಿ.ಐ. (ಫಿಟ್ಟರ್) ಹಾಗೂ ದೈಹಿಕ / ಸಹಿಷ್ಣುತಾ ಪರೀಕ್ಷೆ**

| ಕ್ರ.ಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ. I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | - | - | - | - | - | - | - | - | - |
| 2 | ಮಹಿಳೆ | - | - | 1# | - | - | - | - | - | 1* |
| 3 | ಮಾಜಿ ಸೈನಿಕ | - | - | - | - | 1 | - | - | - | 1 |
| | ಒಟ್ಟು | - | - | 1 | - | 1 | - | - | - | 2 |

# ಭೂಕೆಳಮೈ ಗಣಿಯಲ್ಲಿ ಮಹಿಳಾ ಅಭ್ಯರ್ಥಿಗಳನ್ನು ನಿಯೋಜಿಸಲು ಕಷ್ಟಸಾಧ್ಯವಾಗಿದ್ದು, ವಿನಾಯಿತಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ವಿನಾಯಿತಿಯನ್ನು ಕೋರಲಾಗಿರುತ್ತದೆ. ಆದ್ದರಿಂದ ಅದೇ ಮೀಸಲಾತಿಯ ಪುರುಷ ಅಭ್ಯರ್ಥಿಗಳಿಂದ ಭರ್ತಿಮಾಡಲಾಗುವದು.

4. ಐ.ಟಿ.ಐ. ಎಲೆಕ್ಟ್ರಿಕಲ್ ದರ್ಜೆ–II (ತಾಂತ್ರಿಕ ವಿಭಾಗ) ಹುದ್ದೆಗಳು: 02, ವಿದ್ಯಾರ್ಹತೆ: 2 ವರ್ಷಗಳ ಐ.ಟಿ.ಐ.(ಎಲೆಕ್ಟ್ರಿಕಲ್) ಹಾಗೂ ದೈಹಿಕ/ಸಹಿಷ್ಣುತಾ ಪರೀಕ್ಷೆ

| ಕ್ರಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಮಹಿಳೆ | 1 | - | - | - | - | - | - | - | 1 |
| 2 | ಗ್ರಾಮೀಣ | - | - | - | - | - | - | - | 1 | 1 |
| | ಒಟ್ಟು | 1 | - | - | - | - | - | - | 1 | 2 |

5. ಸೆಕ್ಯೂರಿಟಿ ಗಾರ್ಡ್, ಹುದ್ದೆಗಳು : 24, ವಿದ್ಯಾರ್ಹತೆ : ದ್ವಿತೀಯ ಪಿ.ಯು.ಸಿ/ ಮಾಜಿ ಸೈನಿಕರಾಗಿದ್ದಲ್ಲಿ ಸಿಪಾಯಿ/ನಾಯಕ/ಹವಾಲ್ದಾರ್ ಶ್ರೇಣಿ ಹಾಗೂ ದೈಹಿಕ / ಸಹಿಷ್ಣುತಾ ಪರೀಕ್ಷೆ

| ಕ್ರಸಂ | ಮೀಸಲಾತಿ | ಸಾಮಾನ್ಯ | ಪ.ಜಾ. | ಪ.ಪಂ. | ಪ್ರ I | II(a) | II(b) | III(a) | III(b) | ಒಟ್ಟು |
|---|---|---|---|---|---|---|---|---|---|---|
| 1 | ಇತರೆ | 2 | - | 1 | - | - | - | - | - | 3 |
| 2 | ಮಹಿಳೆ | 3 | 2 | - | - | 2 | - | - | - | 7 |
| 3 | ಗ್ರಾಮೀಣ | 3 | 1 | 1 | - | 1 | - | 1 | - | 7 |
| 4 | ಅಂಗವಿಕಲ | - | - | - | 1 | - | 1 | - | 1 | 3 |
| 5 | ಕನ್ನಡ ಮಾಧ್ಯಮ | 1 | 1 | - | - | - | - | - | - | 2 |
| 6 | ಯೋಜನಾ ನಿರಾಶ್ರಿತರು | 1 | - | - | - | - | - | - | - | 1 |
| 7 | ಮಾಜಿ ಸೈನಿಕ | 1 | - | - | - | - | - | - | - | 1 |
| | ಒಟ್ಟು | 11 | 4 | 2 | 1 | 3 | 1 | 1 | 1 | 24 |

**ಅರ್ಜಿ ಶುಲ್ಕ / ಸ್ವೀಕೃತಿ ಕಾಲಮಿತಿ**

| | |
|---|---|
| ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಪ್ರಾರಂಭಿಕ ದಿನಾಂಕ | 19–03–2024 ಬೆಳಿಗ್ಗೆ 10.00 ಗಂಟೆಯಿಂದ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 03–05–2024 ಸಾಯಂಕಾಲ 5.30 ರವರೆಗೆ |
| ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ | 03–05–2024 ಸಾಯಂಕಾಲ 5.30 ರವರೆಗೆ |

ಪ.ಜಾ., ಪ.ಪಂ., ಪ್ರವರ್ಗ–1, ಮಾಜಿ ಸೈನಿಕ ಮತ್ತು ವಿಶೇಷಚೇತನ ಅಭ್ಯರ್ಥಿಗಳಾದಲ್ಲಿ ರೂ.100/–, ಹಿಂದುಳಿದ ವರ್ಗದ (ಪ್ರವರ್ಗ– 2ಎ, 2ಬಿ, 3ಎ & 3ಬಿ) ಅಭ್ಯರ್ಥಿಗಳಾದಲ್ಲಿ ರೂ.300/– ಮತ್ತು ಸಾಮಾನ್ಯ ಅಭ್ಯರ್ಥಿಗಳಾದಲ್ಲಿ ರೂ.600/– ಮೊತ್ತದ ಶುಲ್ಕವನ್ನು (ಬ್ಯಾಂಕ್ ಶುಲ್ಕವನ್ನು ಹೊರತುಪಡಿಸಿ) ಆನ್ ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪೇಮೆಂಟ್ ಗೇಟ್‌ವೇ ಮೂಲಕ ಪಾವತಿಸಬೇಕು.

**ಸೂಚನೆ** :

a. ವೃತ್ತಿ /ಕಂಪ್ಯೂಟರ್ ಆಧಾರಿತ ಪರೀಕ್ಷೆ (Computer Based Test - CBT) ನಡೆಸುವ ದಿನಾಂಕ ಹಾಗೂ ಸ್ಥಳದ ಮಾಹಿತಿಯನ್ನು ಸಂಬಂಧಿಸಿದವರಿಗೆ ಕಂಪನಿಯ ವೆಬ್‌ಸೈಟ್ ಹಾಗೂ ಇ–ಮೇಲ್ / ಎಸ್.ಎಮ್.ಎಸ್. ಮೂಲಕ ತಿಳಿಸಲಾಗುವುದು ಹಾಗೂ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

b. ವೃತ್ತಿ /ಕಂಪ್ಯೂಟರ್ ಆಧಾರಿತ ಪರೀಕ್ಷೆ (Computer Based Test - CBT)ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಐದು ಅಭ್ಯರ್ಥಿಗಳನ್ನು ಮಾತ್ರ ದೈಹಿಕ / ಸಹಿಷ್ಣುತಾ ಪರೀಕ್ಷೆಗೆ ಹಾಜರಾಗಲು ಸಂಬಂಧಿಸಿದವರಿಗೆ ದೈಹಿಕ / ಸಹಿಷ್ಣುತಾ ಪರೀಕ್ಷೆಯ ವಿವರಗಳು/ಮಾಹಿತಿಯನ್ನು ಕಂಪನಿಯ ವೆಬ್‌ಸೈಟ್ ಹಾಗೂ ಇ–ಮೇಲ್ / ಎಸ್.ಎಮ್.ಎಸ್. ಮೂಲಕ ತಿಳಿಸಲಾಗುವುದು ಹಾಗೂ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

c. ಅರ್ಹತಾ ಪಟ್ಟಿಯನ್ನು ತಯಾರಿಸಲು ಪ್ರತಿ ಹುದ್ದೆಗೆ ನಿಗದಿಪಡಿಸಿದ ಶೈಕ್ಷಣಿಕ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ. 50% (50% weightage) ಹಾಗೂ ನೇಮಕಾತಿ ಪ್ರಾಧಿಕಾರವು ನಡೆಸುವ ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ (Computer Based Test - CBT) ಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ. 50% ಅಂಕಗಳನ್ನು (50% weightage) ಪರಿಗಣಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮೆರಿಟ್ ಮತ್ತು ರೋಸ್ಟರ್ ಮೀಸಲಾತಿ ಆಧಾರದ ಮೇಲೆ ಪ್ರಕಟಿಸಲಾಗುವುದು.

ಷರತ್ತುಗಳು ಮತ್ತು ನಿಬಂಧನೆಗಳು: –

1. ಕಾನೂನು ರೀತ್ಯಾ ಸ್ಥಾಪಿಸಲ್ಪಟ್ಟಿರುವ ಅಂಗೀಕೃತ ವಿಶ್ವವಿದ್ಯಾಲಯಗಳಿಂದ ಪದವಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ 3 ವರ್ಷಗಳ ಡಿಪ್ಲೊಮಾ, ಪೂರ್ವ–ವಿಶ್ವವಿದ್ಯಾಲಯ ಮಂಡಳಿಯಿಂದ ಪಿ.ಯು.ಸಿ ಹಾಗೂ ಕೈಗಾರಿಕೆ ತರಬೇತಿ ಸಂಸ್ಥೆಯಿಂದ 2 ವರ್ಷಗಳ ಐ.ಟಿ.ಐ. ಪ್ರಮಾಣ ಪತ್ರಗಳನ್ನು ಹೊಂದಿರಬೇಕು.
2. ವಯೋಮಿತಿ: ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳು ಮತ್ತು ಪ.ಜಾ./ಪ.ಪಂ. ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳ ವಯೋಮಿತಿಯನ್ನು ಮೀರಿರಬಾರದು.
3. ಅಭ್ಯರ್ಥಿಯು ಮಾಜಿ ಸೈನಿಕ/ವಿಧವೆ/ಅಂಗವಿಕಲರು ಹಾಗೂ ಇನ್ನಿತರರಿಗೆ ಕರ್ನಾಟಕ ಸರ್ಕಾರದ ನೇಮಕಾತಿ ಆದೇಶದಂತೆ ವಯೋಮಿತಿಯಲ್ಲಿ ನಿಯಮಾನುಸಾರ ಸಡಿಲಿಕೆಯನ್ನು ನೀಡಲಾಗುವುದು.
4. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್: 6 ಎಲ್‌ಎಸ್ 2012, ಬೆಂಗಳೂರು, ದಿನಾಂಕ: 06–11–2013 ರಲ್ಲಿ ಗೊತ್ತುಪಡಿಸಿರುವಂತೆ, ಕಲ್ಯಾಣ–ಕರ್ನಾಟಕ ಪ್ರದೇಶ (ಕೆಕೆಪಿ) (ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳು) ಅನುಚ್ಛೇಧ 371 (ಜೆ) ಅನುಸಾರ ನೇಮಕಾತಿ ಪ್ರಕ್ರಿಯೆ ಅಡಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.
5. ಕಲ್ಯಾಣ ಕರ್ನಾಟಕ ಜಿಲ್ಲೆಯ ಅಭ್ಯರ್ಥಿಗಳು ಇಚ್ಚಿಸಿದಲ್ಲಿ ಕಲ್ಯಾಣ ಕರ್ನಾಟಕ ವೃಂದಕ್ಕೆ ಮತ್ತು ಸ್ಥಳಿಯೇತರ (ಉಳಿಕೆ ಮೂಲ) ವೃಂದದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

6. ಸದರಿ ನೇಮಕಾತಿಗಳನ್ನು ಕರ್ನಾಟಕ ಸರ್ಕಾರದ ಪರಿಷ್ಕೃತ ಆದೇಶ ಸಿಆಸುಇ 01 ಸೆಹಿಮ 2022, ದಿನಾಂಕ 28–12–2022 ಹಾಗೂ ಸಿಆಸುಇ2 ಸೆಹಿಮ 2023, ದಿನಾಂಕ 08–03–2023 ರ ರೋಸ್ಟರ್ ಮೀಸಲಾತಿ ನಿಯಮಗಳನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.
7. ಮಾಜಿ ಸೈನಿಕ, ತೃತೀಯ ಲಿಂಗ, ಮಹಿಳೆ ಮತ್ತು ಅಂಗವಿಕಲ ಅಭ್ಯರ್ಥಿಗಳು ಲಭ್ಯವಿರದ ಪಕ್ಷದಲ್ಲಿ, ಅದೇ ವರ್ಗದ ಇತರೆ ಅರ್ಹ ಅಭ್ಯರ್ಥಿಗಳನ್ನು ಭರ್ತಿ ಮಾಡಲಾಗುವುದು.
8. ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿದ ಅಂಚೆ ವಿಳಾಸವು ಅಂತಿಮವಾಗಿದ್ದು, ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
9. ನೇಮಕಾತಿ ಪ್ರಾಧಿಕಾರವು ಹಾಜರುಪಡಿಸಲು ತಿಳಿಸಿದ ಎಲ್ಲಾ ಮೂಲ ಪ್ರಮಾಣ ಪತ್ರಗಳು / ಯೋಗ್ಯತಾ ಪತ್ರಗಳು / ದಾಖಲೆಗಳು ಮುಂತಾದವುಗಳನ್ನು ನಿಗದಿಪಡಿಸಿದ ದಿನಾಂಕದಂದು ದೃಢೀಕೃತ ಪತ್ರಗಳೊಂದಿಗೆ ಹಾಜರಪಡಿಸತಕ್ಕದ್ದು.
10. ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ಅಭ್ಯರ್ಥಿಗಳು ನಮೂನೆ–1 ರಲ್ಲಿ ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢೀಕರಿಸಿ ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
11. ಅಂಗವಿಕಲ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆ / ಸಹಿಷ್ಣುತಾ ಪರೀಕ್ಷೆಯಿಂದ ವಿನಾಯಿತಿಯನ್ನು ನೀಡಲಾಗಿದೆ.
12. ಎಲ್ಲಾ ಹುದ್ದೆಗಳಿಗೆ ಕನ್ನಡ ಭಾಷಾ ಜ್ಞಾನ ಕಡ್ಡಾಯವಾಗಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ / ದ್ವಿತಿಯ ಭಾಷೆಯನ್ನು ತೆಗೆದುಕೊಂಡು ಉತ್ತೀರ್ಣರಾಗಿದ್ದಲ್ಲಿ ಕಂಪನಿ ನಡೆಸುವ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿಯನ್ನು ನೀಡಲಾಗಿದೆ. ನೇಮಕಾತಿಗೆ ಆಯ್ಕೆಯಾದ ಅಭ್ಯರ್ಥಿಗಳು ಕಂಪನಿ ನಡೆಸುವ ಕನ್ನಡ ಭಾಷಾ ಪರೀಕ್ಷೆಯನ್ನು ತಮ್ಮ ಖಾಯಂ ಪೂರ್ವ ಅವಧಿಯು ಮುಗಿಯುವದರೊಳಗೆ ಉತ್ತೀರ್ಣರಾಗತಕ್ಕದ್ದು, ಇಲ್ಲವಾದಲ್ಲಿ ಅವರ ಖಾಯಂ ಪೂರ್ವ ಅವದಿಯನ್ನು ವಿಸ್ತರಿಸಲಾಗುವುದು.
13. ಮೇಲೆ ತಿಳಿಸಿರುವ ಹುದ್ದೆಗಳ ಸಂಖ್ಯೆಗಳು ತಾತ್ಕಾಲಿಕವಾಗಿದ್ದು, ಅವಶ್ಯಕತೆಗಳ ಆಧಾರದ ಮೇಲೆ ಮಾರ್ಪಾಡು ಮಾಡುವ ಹಕ್ಕನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
14. ಯಾವುದೇ ಕಾರಣ ನೀಡದೇ ಯಾವುದೇ ಅಭ್ಯರ್ಥಿಗಳ ನೇಮಕಾತಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
15. ಒಬ್ಬ ಜೀವಂತ ಪತ್ನಿ/ಪತಿಗಿಂತ ಹೆಚ್ಚು ಪತ್ನಿ/ಪತಿಯರನ್ನು ಹೊಂದಿರುವ ಪುರುಷ/ಮಹಿಳಾ ಅಭ್ಯರ್ಥಿಗಳು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
16. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ನೇಮಕಾತಿ ಪ್ರಾಧಿಕಾರವು ನಿಗದಿಪಡಿಸಿದ ದೈಹಿಕ / ಸಹಿಷ್ಣುತಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕು.
17. ಆಯ್ಕೆಯಾದ ಅಭ್ಯರ್ಥಿಯ ನೇಮಕಾತಿಯು, ನೇಮಕಾತಿ ಪ್ರಾಧಿಕಾರದಿಂದ ರಚಿಸಲ್ಪಡುವ ಸಮಿತಿಯಿಂದ ವೈದ್ಯಕೀಯವಾಗಿ ಅರ್ಹತಾ ಪರೀಕ್ಷೆಯ ದೃಢೀಕರಣಕ್ಕೆ ಒಳಪಟ್ಟಿರುತ್ತದೆ ಮತ್ತು ಅಂತಿಮವಾಗಿರುತ್ತದೆ.
18. ಆಯ್ಕೆಯಾದ ಅಭ್ಯರ್ಥಿಗಳು ನೇಮಕಾತಿ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.
19. ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ಪೋಲೀಸ್ ಇಲಾಖೆಯಿಂದ ಪೂರ್ವಚರಿತ್ರೆ ಪರಿಶೀಲನಾ ವರದಿಯ ಷರತ್ತಿಗೆ ಒಳಪಟ್ಟಿರುತ್ತದೆ.
20. ನೇಮಕಾತಿ ಪ್ರಕ್ರಿಯೆಯ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ಪತ್ರ ವ್ಯವಹಾರ ಹಾಗೂ ವಿಚಾರಣೆಗೆ ಅವಕಾಶವಿರುವುದಿಲ್ಲ.
21. ನೇಮಕಾತಿಗಾಗಿ ಯಾವುದೇ ರೀತಿಯ ಶಿಫಾರಸ್ಸು ತಂದಲ್ಲಿ, ಅಂತಹ ಅಭ್ಯರ್ಥಿಗಳನ್ನು ಅನರ್ಹತೆಗೊಳಿಸಲಾಗುವುದು.
22. ಅಭ್ಯರ್ಥಿಯು ತಮ್ಮ ವ್ಯಕ್ತಿಗತ ವಿವರ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ, ತೃತೀಯ ಲಿಂಗ ಪ್ರಮಾಣ ಪತ್ರ (ನಿಗದಿಪಡಿಸಿದ ನಮೂನೆಯಲ್ಲಿ), ಅಂಗವಿಕಲ ಅಭ್ಯರ್ಥಿ ಪ್ರಮಾಣ ಪತ್ರ (ಸಕ್ಷಮ ಪ್ರಾಧಿಕಾರದಿಂದ್ರ), ಡಿಸ್‌ಚಾರ್ಜ್ ಪ್ರಮಾಣ ಪತ್ರ (ಮಾಜಿ ಸೈನಿಕನಾಗಿದ್ದಲ್ಲಿ), ನಿರಾಕ್ಷೇಪಣಾ ಪ್ರಮಾಣ ಪತ್ರ (ಸರ್ಕಾರಿ ನೌಕರರಾಗಿದ್ದಲ್ಲಿ) ಮತ್ತು ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಚ್ಛೇದ 371(ಜೆ) ಸ್ಥಳೀಯ ಪ್ರಮಾಣ ಪತ್ರ, ಇತ್ಯಾದಿ ಪ್ರತಿಗಳನ್ನು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿ ಇರುವಂತೆ ಪಡೆದಿಟ್ಟುಕೊಂಡು ಅರ್ಜಿಯೊಂದಿಗೆ ಕಡ್ಡಾಯವಾಗಿ ಕಂಪನಿಯ ವೆಬ್‌ಸೈಟ್ https://huttigold.karnataka.gov.in ನಲ್ಲಿ ಅಪ್‌ಲೋಡ್ ಮಾಡುವದರೊಂದಿಗೆ ಆನ್‌ಲೈನ್ ಮೂಲಕ ನಿಗದಿತ ಅವಧಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಒಂದು ವೇಳೆ ಅರ್ಜಿ ಸಲ್ಲಿಸಲು ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದಾದರೂ ತೊಂದರೆಯಾದಲ್ಲಿ ವೆಬ್‌ಸೈಟ್‌ನಲ್ಲಿ ನಮೂದಿಸಲಾದ ಹೆಲ್ಪ್ ಲೈನ್ ನಂಬರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು